**ಓಎಸ್ ನಂ:53/2016**
**ಡಿ.ಡಬ್ಲ್ಯೂ: 01**

**ದಿನಾಂಕ: 01.07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು: ಶ್ರೀ ಎನ್.ಟಿ.ಎಸ್., ವಾದಿ ಪರ ವಕೀಲರಿಂದ**

ಓ ಎಸ್ 211/2015 ದಾವೆಯನ್ನು ರಾಜೀ ಡಿಕ್ರಿ ಮಾಡಿಕೊಂಡ ನಂತರ ಚಳ್ಳಕೆರೆ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಓ.ಎಸ್ 136/2020 ರ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ಜಗಳೂರಮ್ಮ, ಈರಮ್ಮ ಮತ್ತು ಪಾಪಕ್ಕ ರವರು ಓ ಎಸ್ 136/2020 ದಾವೆಯನ್ನು ನಿಂಗಮ್ಮ, 5 ನೇ ಪ್ರತಿವಾದಿ, ಮಂಜುಳ, ಶಿವಕುಮಾರ, 7 ಮತ್ತು 8 ನೇ ಪ್ರತಿವಾದಿ, 2 ಮತ್ತು 3 ನೇ ಪ್ರತಿವಾದಿ, ಶ್ರೀದೇವಿ ಹಾಗೂ ವಿಶೇಷ ಭೂ-ಸ್ವಾಧೀನ ಪ್ರಾಧಿಕಾರದ ಅಧಿಕಾಗಿಗಳವರ ವಿರುದದ ಸಲ್ಲಿಸಿದ್ದರು ಎಂದರೆ ಸರಿ. ಓ.ಎಸ್. 136/2020 ರ ದಾವೆಯನ್ನುಈ ದಾವೆಯ ದಾವಾ ಸ್ವತ್ತಿನ ಪಾಲು ವಿಭಾಗಕ್ಕಾಗಿ ಸಲ್ಲಿಸಲಾಗಿತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ವಾದಿಯರನ್ನು ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿಯು ವಾದಿಯರು ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆಯ ಸಂಗತಿಯನ್ನು ಓ.ಎಸ್ 136/2020 ರ ದಾವೆಯಲ್ಲಿ ಪ್ರಸ್ತಾಪಿಸಿರುವುದಿಲ್ಲ ಎಂದರೆ ಸರಿ. ಓ.ಎಸ್ 211/2015 ರ ದಾವೆಯನ್ನು ರಾಜೀ ಮಾಡಿಕೊಂಡಿರುವ ವಿಚಾರವನ್ನು ನಮ್ಮ ತಕರಾರಿನಲ್ಲ ತಿಳಿಸಿಲ್ಲ ಎಂದರೆ ಸಾಕ್ಷಿಯು ವಕೀಲರಿಗೆ ನೀವು ದಾವೆಯಲ್ಲಿ ಹಾಜರಾಗಿದ್ದರಿಂದ ಮಾಹಿತಿ ಇರುತ್ತದೆಯಲ್ಲಾ ಅದಕ್ಕೆ ತಿಳಿಸಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯರು ಓ ಎಸ್ 136/2020 ರ ದಾವೆಯಲ್ಲಿ ಅವಶ್ಯ ಪಕ್ಷಗಾರರಾಗಿ ಸೇರ್ಪಡೆ ಮಾಡಿಕೊಳ್ಳಲು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿಯನ್ನು ಘನ ನ್ಯಾಯಾಲಯವು ಪುರಸ್ಕರಿಸಿರುತ್ತದೆ ಎಂದರೆ ಸರಿ. ಸದರಿ ದಾವೆಯನ್ನು ಜಗಳೂರಮ್ಮರವರು ವಾಪಾಸ್ಸು ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ನಾವು ಮತ್ತು ಜಗಳೂರಮ್ಮರವರು ನ್ಯಾಯಾಲಯದ ಹೊರಗಡೆ ರಾಜೀ ಮಾಡಿಕೊಂಡಿದ್ದರಿಂದ ಸದರಿ ದಾವೆಯನ್ನು ಮುಂದುವರೆಸದಂತೆ ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿ. ದಾವಾ ಸ್ವತ್ತಿಗೆ ಸಂಬಂಧಿಸಿದತೆ ಚಿತ್ರದುರ್ಗ ಜಿಲ್ಲಾ ನ್ಯಾಯಾಲಯ ದಲ್ಲಿ ಎ.ಎ. 26/2021

ದಾವೆ ಇತ್ಯರ್ಥಕ್ಕೆ ಬಾಕಿ ಇರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ವಾದಿಯರು ತಕರಾರು

ಸಲ್ಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ವಾದಿಯರನ್ನು ಪಕ್ಷಗಾರರನ್ನಾಗಿ ಸೇರಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನ್ಯಾಯಾಲಯದಲ್ಲಿ ಇತ್ಯರ್ಥ ಮಾಡಿಕೊಂಡ ನಂತರ ತೀರ್ಮಾನಿಸುವುದಾಗಿ ಪೆಂಡಿಂಗ್ ಇಡಲಾಗಿರುತ್ತದೆ ಎಂದರೆ ಸರಿ.

ವಾದಿಯರು ಎ.ಎ. 26/2021 ರ ಪ್ರಕರಣದಲ್ಲಿ ಸಲ್ಲಿಸಿರುವ ತಕರಾರನ್ನು ನಾನು ತಿಳಿದುಕೊಂಡಿರುವುದಿಲ್ಲ ನನ್ನ ತಮ್ಮ ತಿಳಿದುಕೊಂಡಿರುತ್ತಾನೆ. ದಾವಾ ಸ್ವತ್ತು ನನ್ನ ತಾತನಿಗೆ ದರಕಾಸ್ತಿನ ಮೂಲಕ ಬಂದಿರುತ್ತದೆ. ಸದರಿ ಆಸ್ತಿಯು ಪಿತ್ರಾರ್ಜಿತ ಆಸ್ತಿ ಅಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನು ನನ್ನ ತಂದೆ ರಾಮಚಂದ್ರಪ್ಪ, ಈರಣ್ಣ, ಪಾಲಯ್ಯ ರವರಿಗೆ ತಲಾ 1 ಎಕರೆ ಜಮೀನನ್ನು ಜುಬಾನೆ ಮೂಲಕ ಹಂಚಿಗೆ ಮಾಡಿ ಉಳಿದ 1 ಎಕರೆ ಜಮೀನನ್ನು ಬೊಮ್ಮಯ್ಯ ರವರು ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ಬೊಮ್ಮಯ್ಯನ ಪಾಲನೆ ಪೋಷಣೆಯನ್ನು ಬೊಮ್ಮಯ್ಯನ 2 ನೇ ಹೆಂಡತಿಯ ಮಗ ವೀರೇಶ್ ಮಾಡುತ್ತಿದ್ದರು ಎಂದರೆ ಸರಿಯಲ್ಲ. ವಿರೇಶ್ ರವರು ಬೊಮ್ಮಯ್ಯ ರವರ ಜೀವಿತಾವಧಿಯಲ್ಲಿ ಪಾಲನೆ ಪೋಷಣೆ ಮಾಡುತ್ತಿದ್ದರಿಂದ ದಿನಾಂಕ 05.12.2003 ರಲ್ಲಿ ವಿರೇಶ್ ರವರ ಹೆಸರಿಗೆ ಮರಣ ಶಾಸನವನ್ನು ಬರೆಯಲಾಗಿರುತ್ತದೆ ಎಂದರೆ ಸರಿಯಲ್ಲ. ವಿಲ್ ಪತ್ರವನ್ನು ಬರೆದುಕೊಡುವ ಸಮಯದಲ್ಲಿ ಬೊಮ್ಮಯ್ಯ ರವರ ಆರೋಗ್ಯವಾಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಪಾರ್ಶ್ವವಾಯು ಆಗಿತ್ತು ಎಂದು ನುಡಿಯುತ್ತಾರೆ. ಸದರಿ ವಿಚಾರವಾಗಿ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಿಲ್ಲ. ವೀರೇಶ್ ರವರಿಗೆ ಮರಣ ಶಾಸನ ಬರೆದಿರುವ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಸರೋಜಮ್ಮ, ಆಕೆಯ ಮಗ ವೀರೇಶ ಹಾಗೂ ವಾದಿಯರು ಚಳ್ಳಕೆರೆ ನಗರದ ವಾಲ್ಮೀಕಿ ನಗರದಲ್ಲಿ ವಾಸವಾಗಿದ್ದರು ಎಂದರೆ ಸರಿ. ಆದ ಕಾರಣ ಸದರಿಯವರ ಚುನಾವಣಾ ಗುರುತಿನ ಚೀಟಿಯಲ್ಲಿ ವಾಲ್ಮೀಕಿ ನಗರದ ವಿಳಾಸ ಇರುತ್ತದೆ ಎಂದರೆ ಸರಿ. ಬೊಮ್ಮಯ್ಯ ಮೃತರಾದಾಗ ಅವರ ವಿಧಿ ವಿಧಾನಗಳನ್ನು ವೀರೇಶ್ ರವರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಬೊಮ್ಮಯ್ಯರವರು ಮೃತರಾಗುವ ಪೂರ್ವದಲ್ಲಿಯೇ ಅವರು ಬರೆದಿದ್ದ ಮರಣ ಶಾಸನ ಪತ್ರವನ್ನು ವಿರೇಶ್ ರವರಿಗೆ

**ಓಎಸ್ ನಂ:53/2016**
**ಡಿ.ಡಬ್ಲ್ಯೂ: 01**

ನೀಡಿದ್ದ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಸರೋಜಮ್ಮರವರು ರಾಮಚಂದ್ರಪ್ಪ ರವರ ಹೆಂಡತಿ ಅಲ್ಲ ಎಂದು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ಸರೋಜಮ್ಮ ರವರು ದೊಡ್ಡೇರಿ ಹಾಗೂ ಚಿತ್ರದುರ್ಗದ ಚೌಳಗುಡ್ಡದಲ್ಲಿ ವಾಸವಿದ್ದ ಬಗ್ಗೆ ನಾನೇ ಖುದ್ದು ಹೋಗಿ ಅಕ್ಕಪಕ್ಕದವರನ್ನು ಕೇಳಿ ತಿಳಿದುಕೊಂಡಿರುತ್ತೇನೆ. ಮಾಹಿತಿಯನ್ನು ತಿಳಿಸಿದ ವ್ಯಕಿತಗಳ ಹೆಸರು ವಿಳಾಸ ನನಗೆ ಗೊತ್ತಿಲ್ಲ.

**( ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.